ಹೊತ್ತಾಗಿತ್ತು. ಅವಳು ಬಾಗಿಲು ತಟ್ಟಿದಾಗ ಮಿಸ್ಟರ್ ಫೋಸ್ಟರ್ ಲೈಬ್ರೆರಿಯಲ್ಲಿದ್ದರು.

'ಪ್ಯಾರಿಸ್ ಹೇಗಿತ್ತು ಡಾರ್ಲಿಂಗ್?' ಮಿಸ್ಟರ್ ಫೋಸ್ಟರರ ದನಿಯಲ್ಲಿ ವ್ಯಂಗ್ಯ ತುಂಬಿತ್ತು.

'ಫ್ಲೈಟ್ ನಾಳೆ ಬೆಳಿಗ್ಗೆ ಹನ್ನೊಂದಕ್ಕೆ ಹೊರಡುವುದಂತೆ.' ಆಕೆ ಉತ್ತರಿಸಿದಳು.

'ನೀನೇನು ಹೇಳುವುದು, ಮಂಜು ತಿಳಿಯಾದರೆ!'

'ಈಗಲೇ ತಿಳಿಯಾಗುತ್ತಿದೆ. ಗಾಳಿನೂ ಬೀಸುತ್ತಾ ಇದೆ.'

'ನೀನು ತುಂಬಾನೆ ಬಳಲಿದಂತೆ ಕಾಣಿಸುತ್ತಿದ್ದೀಯ.'

'ಇಡೀ ದಿವಸ ಕುಳಿತುಕೊಂಡು ಬೇಜಾರಾಯಿತು. ನಾನು ಮಲಗಲು ಹೋಗುತ್ತಿದ್ದೇನೆ. ಗುಡ್ ನೈಟ್ ಡಿಯರ್.'


'ಬೆಳಿಗ್ಗೆ ಒಂಬತ್ತಕ್ಕೆ ಕಾರಿಗೆ ಹೇಳಿದ್ದೇನೆ.'

'ಥ್ಯಾಂಕ್ಯೂ ಡಿಯರ್. ನನ್ನೊಟ್ಟಿಗೆ ಏರ್‌ಪೋರ್ಟಿಗೆ ಬರುವ ತೊಂದರೆ ತೆಗೆದುಕೊಳ್ಳಬೇಡಿ. ನಾನೇ ನಿಭಾಯಿಸುತ್ತೇನೆ.'

'ಆಯ್ತು ಮಾರಾಯ್ತಿ. ಆದರೆ ನನಗೆ ಕ್ಲಬ್ಬಿನವರೆಗೊಂದು ಡ್ರಾಪ್ ಕೊಡು.'

ಮಿಸೆಸ್ ಫೋಸ್ಟರ್ ಗಂಡನನ್ನೇ ದಿಟ್ಟಿಸಿ ನೋಡಿದಳು. ಅವರು ಬಹಳ ದೂರದಲ್ಲಿ ನಿಂತವರಂತೆ ತುಂಬಾ ಸಣ್ಣದಾಗಿ, ಅಪರಿಚಿತರಂತೆ ಕಾಣಿಸತೊಡಗಿದರು.

'ನಿಮ್ಮ ಕ್ಲಬ್ಬು ಏರ್‌ಪೋರ್ಟಿನ ವಿರುದ್ಧ ದಿಕ್ಕಿಗಿರುವುದಲ್ಲವೇ ಡಿಯರ್?' ಅವಳು ಭಾವನಾರಹಿತ ಸ್ವರದಲ್ಲಿ ಕೇಳಿದಳು.



'ನಿನಗೆ ತುಂಬಾ ಟೈಮಿದೆ ಡಾರ್ಲಿಂಗ್... ಮನಸಿಲ್ಲದಿದ್ದರೆ ಬೇಡ ಬಿಡು.'

'ಹಾಗೇನಿಲ್ಲ ಡಿಯರ್. ನೀವು ಹೇಳಿದ ಹಾಗೆಯೇ ಆಗಲಿ.'

'ಥ್ಯಾಂಕ್ಯು ಡಾರ್ಲಿಂಗ್. ಈಗ ನೀನು ಮಲಗು. ಬೆಳಿಗ್ಗೆ ಸಿಗುತ್ತೇನೆ.'

ಮಿಸೆಸ್ ಫೋಸ್ಟರ್ ಮಹಡಿ ಮೇಲಿನ ತನ್ನ ಬೆಡ್‌ರೂಮಿಗೆ ಹೋದಳು. ಅವಳಿಗೆ ಎಷ್ಟೊಂದು ಆಯಾಸವಾಗಿತ್ತೆಂದರೆ, ಹಾಸಿಗೆಗೆ ಮೈ ಚೆಲ್ಲಿದಾಕ್ಷಣ ನಿದ್ದೆ ಆವರಿಸಿಕೊಂಡು ಬಿಟ್ಟಿತು.

ಮರುದಿನ ಬೆಳಿಗ್ಗೆ ಅವಳಿಗೆ ಬೇಗನೇ ಎಚ್ಚರವಾಯಿತು. ಅವಳು ತಯಾರಾಗಿ ಸರಿಯಾಗಿ ಎಂಟೂವರೆಗೆ ಕೆಳಗೆ ಡ್ರಾಯಿಂಗ್ ರೂಮಿಗೆ ಬಂದಳು.

ಮಿಸ್ಟರ್ ಫೋಸ್ಟರ್ ಹೊರಬರುವಾಗ ಒಂಬತ್ತು ದಾಟಿತ್ತು. 'ಕಾಫಿ ಏನಾದ್ರೂ ಮಾಡಿದ್ದೀಯ?' ಅವರು ಕೇಳಿದರು.

'ಇಲ್ಲ ಡಿಯರ್. ನೀವು ನಾಸ್ತಾ ಮಾಡುವಾಗ ಕ್ಲಬ್ಬಿನಲ್ಲೇ ಕಾಫಿ ಕುಡಿಯಿರಿ. ಕಾರು ಬಂದಿದೆ, ಹಾಗೂ ನಾನೂ ತಯಾರಾಗಿದ್ದೇನೆ.'

ಇತ್ತೀಚಿನ ದಿನಗಳಲ್ಲಿ ಅವರು ಹೆಚ್ಚಾಗಿ ಡ್ರಾಯಿಂಗ್ ಹಾಲಿನಲ್ಲೇ ಭೇಟಿಯಾಗುವ ಪರಿಪಾಠವಿತ್ತು.